ಓ. ಎಸ್. ನಂ. 204 /2011 ಪಿ ಡಬ್ಲ್ಯೂ – 1

**ದಿನಾಂಕಃ 19.02.2020 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಶ್ರೀ ಎಂ ಆರ್ ಕೆ ವಕೀಲರಿಂದ**

ನಾನು ಪಿಯುಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ಈ ದಾವೆಯಲ್ಲಿ ಪ್ರತಿವಾದಿಯರು ಏನು ತಕರಾರು ಸಲ್ಲಿಸಿರುತ್ತಾರೆ ಹಾಗೂ ನ್ಯಾಯಾಲಯಕ್ಕೆ ಏನು ದಾಖಲೆ ಸಲ್ಲಿಸಿರುತ್ತಾರೆ ಎಂದು ಕೇಳಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿ 1 ಹಾಗೂ 2 ನನ್ನ ತಂದೆಯ ಸಹೋದರಿಯರು ಎಂದರೆ ಸರಿ. ನನ್ನ ತಂದೆಯ ತಾಯಿಯ ಹೆಸರು ದೇವಮ್ಮ ಎಂದರೆ ಸಾಕ್ಷಿ ಮಾದಮ್ಮ ಎಂದು ನುಡಿಯುತ್ತಾರೆ. 1 ನೇ ವಾದಿಯ ತಂದೆಯ ಹೆಸರು ಗುರುಮಲ್ಲಪ್ಪ ಎಂದರೆ ಸರಿ. ಗುರುಮಲ್ಲಪ್ಪನಿಗೆ ಶಿವನಪ್ಪ, ಶಿವಬಸಪ್ಪ ಹಾಗೂ ಗುರುಸ್ವಾಮಿ ಎಂಬ ಮೂರರು ತಮ್ಮಂದಿರು ಎಂದರೆ ಸರಿ. ಅವರ ತಂದೆಯ ಹೆಸರು ಹುಚ್ಚಪ್ಪ ಎಂದರೆ ಸರಿ. ಸದರಿ ಶಿವನಪ್ಪನ ಹೆಂಡತಿಯ ಹೆಸರು ಶಿವನಮ್ಮ ಎಂದರೆ ಸರಿ. ಸದರಿ ಗುರುಮಲ್ಲಪ್ಪ 1976 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ.

ನನ್ನ ತಂದೆ ತಮ್ಮ 80 ನೇ ವಯಸ್ಸಿನಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಗುರುಮಲ್ಲಪ್ಪ ದೇವಮ್ಮನ ಮರಣ ನಂತರ ರೇವಮ್ಮನನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ಸದರಿ ರೇವಮ್ಮನನ್ನು ಶಿವಮ್ಮ ಎಂದು ಕರೆಯುತ್ತಿರಲಿಲ್ಲ ಎಂದರೆ ಸರಿ. ಪ್ರತಿವಾದಿ 3 ರಿಂದ 7 ಸದರಿ ರೇವಮ್ಮನ ಮಕ್ಕಳು ಎಂದರೆ ಸರಿ. ಸದರಿ ಶಿವನಪ್ಪ ಹಾಗೂ ಶಿವನಮ್ಮನಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿ. ಶಿವನಪ್ಪ , ಗುರುಮಲ್ಲಪ್ಪ ತಮಿಳು ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ನನಗೆ ತಿಳಿದಿಲ್ಲ. ಸದರಿ ಶಿವನಮ್ಮನಿಗೆ ಬರೆಯಲು ಬರುತ್ತಿರಲಿಲ್ಲ ಎಂದರೆ ನನಗೆ ತಿಳಿದಿಲ್ಲ. ನನ್ನ ತಂದೆಯ 6 ನೇ ವಯಸ್ಸಿನಲ್ಲಿ ಸದರಿ ಶಿವನಮ್ಮ ಹಾಗೂ ಶಿವನಪ್ಪ ರವರನ್ನು ದತ್ತು ಪಡೆದಿರುತ್ತಾರೆ ಎಂದರೆ ಸರಿ. ಆ ಸಂಬಂಧ ಶಿವನಪ್ಪನ ಮರಣ ನಂತರ

ಶಿವನಮ್ಮ ದತ್ತು ಸ್ವೀಕಾರ ಪತ್ರ ಬರೆದಿರುತ್ತಾರೆಂದರೆ ಸರಿ. ಸಾಕ್ಷಿಗೆ ಸದರಿ ಪತ್ರವನ್ನು ನೋಡಿ ಗುರುತಿಸಲು ಹೇಳಲಾಗಿ, ಸಾಕ್ಷಿ ಅದನ್ನು ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಗುರುಮಲ್ಲಪ್ಪ ಹಾಗೂ ಶಿವನಪ್ಪನ ರುಜುಗಳನ್ನು ನನಗೆ ಗುರುತಿಸಲು ಆಗುವುದಿಲ್ಲ. ನಾನು ಅವರುಗಳ ರುಜುಗಳನ್ನು ನೋಡಿರುತ್ತೇನೆಂದರೆ ಸರಿ. ಗುರುಸ್ವಾಮಿ ಕನ್ನಡದಲ್ಲಿ ರುಜು ಮಾಡುತ್ತಿದ್ದರು ಎಂದರೆ ನನಗೆ ತಿಳಿದಿಲ್ಲ.

ನಾನು 09.05.1976 ರಲ್ಲಿ ಜನಿಸಿರುತ್ತೇನೆ. ಸಾಕ್ಷಿಗೆ ನಿಡಿ-1 ರಲ್ಲಿನ ಸಂಗತಿಗಳನ್ನು ಓದಿ ಹೇಳಿದ್ದು, ಸಾಕ್ಷಿ ಸದರಿ ಸಂಗತಿಗಳು ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯವಾಗಿ ನಾನು ನನ್ನ ಕುಟುಂಬದಲ್ಲಿ ವಿಚಾರ ಮಾಡಿರುವುದಿಲ್ಲ. ಆ ಸಂಬಂಧ ನಾನು ನನ್ನ ಹಿರಿಯರಲ್ಲಿ ವಿಚಾರ ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಹೇಗೆ ಬಂದಿರುತ್ತವೆ ಎಂಬ ಬಗ್ಗೆ ನಾನು ನಮ್ಮ ಕುಟುಂಬದಲ್ಲಿ ವಿಚಾರ ಮಾಡಿ ತಿಳಿದುಕೊಂಡಿರುವುದಿಲ್ಲ. ನಿಡಿ-1 ಪತ್ರವನ್ನು ರದ್ದುಪಡಿಸಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ.

ಶಿವನಮ್ಮ ಸುಮಾರು 12-13 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆಂದರೆ ಸರಿ. ಆಕೆ ಮೃತಪಟ್ಟಾಗ ಆಕೆಗೆ ಸುಮಾರು 75 ವರ್ಷ ವಯಸ್ಸು ಎಂದರೆ ಸರಿ. ಆಕೆಯ ಅಂತ್ಯ ಕ್ರಿಯೆಯನ್ನು ನನ್ನ ತಂದೆ ಮಾಡಿರುತ್ತಾರೆಂದರೆ ಸಾಕ್ಷಿ ಎಲ್ಲರೂ ಸೇರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆಕೆಗೆ ಗಂಡು ಮಕ್ಕಳು ಇಲ್ಲದ ಕಾರಣ ನನ್ನ ತಂದೆಯೆ ಆಕೆಯ ದತ್ತು ಮಗನಾಗಿ ಎಲ್ಲಾ ಕಾರ್ಯ ಮಾಡಿರುತ್ತಾರೆಂದರೆ ಸರಿಯಲ್ಲ. ಶಿವನಪ್ಪ ಯಾವಾಗ ಮೃಪಟ್ಟಿರುತ್ತಾರೆ ನನಗೆ ತಿಳಿದಿಲ್ಲ. ನನ್ನ ತಂದೆ ಶಿವನಪ್ಪನಿಗೆ ದತ್ತು ಹೋದ ನಂತರ ಪುನಃ ಆತನ ನೆಸರ್ಗಿಕ ತಂದೆ ಗುರುಮಲ್ಲಪ್ಪನ ಕುಟುಂಬದೊಂದಿಗೆ ಬಂದು ವಾಸಿಸಿದ ಬಗ್ಗೆ ಯಾವುದೇ ದಾಖಲೆ ಇದೆಯೇ ಎಂದರೆ ಸಾಕ್ಷಿ ನನ್ನ ತಂದೆ ಎಂದು ದತ್ತು ಹೋಗಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ಪತ್ರವನ್ನು ರದ್ದು ಪಡಿಸುವಂತೆ ಯಾವುದೇ ಪರಿಹಾರ ಕೋರಲು ನನಗೆ

ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯನ್ನು ಅವರು ಶಾಸ್ತ್ರೋಕ್ತವಾಗಿ ದತ್ತುಪಡೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಹಾಗೂ ತಾತನ ಕುಟುಂಬದಲ್ಲಿ ನನಗೆ ಬುದ್ಧಿ ಬರುವ ಪೂರ್ವದಲ್ಲಿ ಏನು ವ್ಯವಹಾರ ಆಗಿರುತ್ತದೆ ನನಗೆ ಖುದ್ದು ತಿಳಿದಿಲ್ಲ. ಆ ಬಗ್ಗೆ ನಾನು ಎಂದು ನನ್ನ ತಂದೆಯನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ನಿಡಿ–1 ರ ಸಾಕ್ಷಿದಾರರು ಈಗ ಜೀವಂತ ಇರುವುದಿಲ್ಲ. ಅವರು ಯಾವಾಗ ಮೃತಪಟ್ಟಿರುತ್ತಾರೆ ನನಗೆ ತಿಳಿದಿಲ್ಲ. ಅವರು ಬಹಳ ಹಿಂದೆಯೇ ಮೃತಪಟ್ಟಿರುತ್ತಾರೆ. ನಿಡಿ–1 ರ ಪತ್ರ ಬರಹಗಾರರ ಬಗ್ಗೆ ಸಹ ನನಗೆ ತಿಳಿದಿಲ್ಲ. ನಿಡಿ–1 ರ ಸಂಗತಿ ನನಗೆ ಸಂಪೂರ್ಣ ತಿಳಿದಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ದತ್ತು ಹೋದ ಕಾರಣ ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನಮ್ಮ ಒಟ್ಟು ಕುಟುಂಬದ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ.

**ಮುಂದೂವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಟಿ. ಶ್ರೀಕಾಂತ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.